ಸಿ. ಸಿ. ನಂ.- **1047/2023**

ಪಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- **16-07-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀಸವಾಲು- ಆರೋಪಿ ಪರ ಶ್ರೀ ಕೆ ವಿ ಬಿ ವಕೀಲರಿಂದ -

ಯಾವ ದಿನಾಂಕಗಳಂದು ಆರೋಪಿಗೆ ನಾನು ಹಣವನ್ನು ಕೊಟ್ಟಿರುತ್ತೇನೆ ಎಂಬ ಬಗ್ಗೆ ದೂರಿನಲ್ಲಿ ಅದರ ಪಟ್ಟಿ ಬರೆದಿರುತ್ತೇನೆ. ತಿಂಗಳಿಗೊಮ್ಮೆ ಅಥವಾ ಪ್ರತಿದಿನ ಆರೋಪಿಗೆ ಹಣವನ್ನು ಕೊಡುತ್ತಿದ್ದಿರೆ ? ಎಂದರೆ ಸಾಕ್ಷಿ ಆರೋಪಿಗೆ ಅವಶ್ಯಕತೆ ಹಾಗೂ ಅವಸರ ಇದ್ದಾಗ ಮಾತ್ರ ಹಣ ಕೊಡುತ್ತಿದ್ದೆ ಎಂದು ನುಡಿಯುತ್ತಾರೆ. ಆರೋಪಿ ನಾನು ನೀಡುತ್ತಿದ್ದ ಹಣದ ಪಾವತಿ ಎಂದಿಗೂ ಮಾಡಲಿಲ್ಲ. ಹೀಗಿದ್ದರು ಸಹ ಅಂದರೆ ಆರೋಪಿ ಹಣದ ಪಾವತಿ ಮಾಡದೆ ಇದ್ದರು ಸಹ ನೀವು ಅವರಿಗೆ ಹಣವನ್ನು ಕೊಡುತ್ತಲೇ ಬಂದಿರಾ ? ಎಂದರೆ ಸಾಕ್ಷಿ ಆರೋಪಿ ಗೆ ಅವಶ್ಯಕತೆ ಇದ್ದ ಕಾರಣ ಅವರು ಮರುಪಾವತಿ ಮಾಡದೆ ಇರುತ್ತಿದ್ದ ವಿಷಯವನ್ನು ಪರಿಗಣಿಸದೆ ಹಣವನ್ನು ಕೊಡುತ್ತಿದ್ದೆ ಎಂದು ನುಡಿಯುತ್ತಾರೆ. ಆರೋಪಿ ನನಗೆ ಹಣದ ಸಂಪೂರ್ಣ ಮರುಪಾವತಿ ಮಾಡಿದ್ದರು ಸಹ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಆದಾಯ ತೆರಿಗೆ ಅರ್ಜಿಯಲ್ಲಿ ಆರೋಪಿಗೆ ಕೊಡುತ್ತಿದ್ದ ಹಣದ ಬಗ್ಗೆ ನಮೂದು ಮಾಡಿರುತ್ತೀರೆ ? ಎಂದರೆ ಸಾಕ್ಷಿ ಕಳೆದ ಎರಡು ವರ್ಷಗಳಿಂದ ಅದರ ನಮೂದು ಮಾಡುತ್ತಿದ್ದೇನೆ, ಅದಕ್ಕೂ ಮುನ್ನ ಇದರ ಬಗ್ಗೆ ಮಾಹಿತಿ ಆದಾಯ ತೆರಿಗೆ ಅರ್ಜಿಯಲ್ಲಿ ಕೊಡುವ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ದೂರಿನಲ್ಲಿ ನಮೂದು ಮಾಡಿರುವ ಪಟ್ಟಿಯ ಬಗ್ಗೆ ಅಂದರೆ ಯಾವ ದಿನಾಂಕದಂದು ಎಷ್ಟು ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ ಎಂಬ ಬಗ್ಗೆ ಆದಾಯ ತೆರಿಗೆ ಅರ್ಜಿಯಲ್ಲಿ ಕಳೆದ ಎರಡು ವರ್ಷಗಳಿಂದ ಮಾತ್ರ ನಮೂದು ಮಾಡಿರುತ್ತೇನೆ ಅದರ ಹಿಂದೆ ಅವಶ್ಯಕತೆ ಇರದ ಕಾರಣ ನಮೂದು ಮಾಡಿಲ್ಲ. ಕಾನೂನು ಪ್ರಕಾರ ಆದಾಯ ತೆರಿಗೆ ಅರ್ಜಿಯಲ್ಲಿ ಆದಾಯ ತೆರಿಗೆ ಪಾವತಿಧಾರ ಕೆಲವೊಂದು ವ್ಯವಹಾರದ ಬಗ್ಗೆ ತೋರಿಸಬಹುದು ಹಾಗೇಯೆ ತೋರಿಸದೆ ಇರಬಹುದು.

ಪ್ರತಿ ಬಾರಿ ಆರೋಪಿಗೆ ಹಣವನ್ನು ಕೊಡುತ್ತಾ ಇರುವಾಗ ಹಿಂದೆ ಹಣದ ಮರುಪಾವತಿಯ ಬಗ್ಗೆ ಮೌಖಿಕವಾಗಿ ಕೇಳುತ್ತಿದ್ದೆ ಆದರೆ ಲಿಖಿತ ರೂಪದಲ್ಲಿ ಕೇಳಿಲ್ಲ. ನಿಪಿ **1** ಚೆಕ್‌ನಲ್ಲಿ ಇರುವ ಬರವಣಿಗೆ ಹಾಗೂ ಸಹಿಯನ್ನು ನಾನು ಸೃಷ್ಟಿಸಿ ಆರೋಪಿಗೆ ಮೋಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ **1-ಎ** ಸಹಿಯನ್ನು ನಾನೇ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ **3**

ನೋಟಿಸ್ ಆರೋಪಿಗೆ ಮುಟ್ಟಿಲ್ಲ ಎಂದರೆ ಸರಿಯಲ್ಲ. ಚೆಕ್‌ನಲ್ಲಿ ನಮೂದು ಮಾಡಿದ ಮೊತ್ತಕ್ಕೂ, ನನ್ನ ಬ್ಯಾಂಕ್ ಖಾತೆಯ ವಿವರದಲ್ಲಿರುವ ಮೊತ್ತಕ್ಕೂ ತಾಳೆಯಾಗುತ್ತಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ಒಟ್ಟು ಮೊತ್ತ ರೂ. 42,05,000/- ಎಂದು ನಮೂದು ಅಗಿದ್ದು, ನಿಪಿ 1 ಚೆಕ್ ನಲ್ಲಿ ರೂ. 42,00,000/- ಎಂದು ನಮೂದು ಆಗಿದೆ ಎಂದರೆ ಸಾಕ್ಷಿ ಆರೋಪಿ ನನಗೆ ರೂ. 42 ಲಕ್ಷಕ್ಕೆ ನಿಪಿ 1 ಚೆಕ್‌ನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ಚೆಕ್‌ನ್ನು ಆರೋಪಿ ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ಚೆಕ್ ನಲ್ಲಿ ಮೊತ್ತವನ್ನು ನಾನೇ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಸುಳ್ಳಾಗಿ ರೂ. 42 ಲಕ್ಷ ಮೊತ್ತವನ್ನು ನಿಪಿ 1 ಚೆಕ್‌ನಲ್ಲಿ ನಮೂದು ಮಾಡಿರುತ್ತೇನೆ ಎಂದರೆ ಸಾಕ್ಷಿ ಈ ಹಿಂದೆ ನ್ಯಾಯಾಲಯದ ಮುಂದೆ ನಿಪಿ-1 ಚೆಕ್‌ನಲ್ಲಿ ಸಹಿ ಮಾಡಿ ಆರೋಪಿ ನನಗೆ ಸದರಿ ಚೆಕ್ ನ್ನು ಕೊಟ್ಟಿರುತ್ತಾರೆ, ಅದರಲ್ಲಿ ನಾನು ಬೇರೆ ವಿಚಾರವನ್ನು ಬರೆದಿರುತ್ತೇನೆ ಎಂದು ನುಡಿದಿರುತ್ತೇನೆ ಎಂದು ಹೇಳುತ್ತಾರೆ. ನಾನು ಆರೋಪಿಯ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರಿಂದ, ಅವರಿಗೆ ಸಂಬಂದಪಟ್ಟ ಕೇಲವು ಬ್ಲಾಕ್ ಚೆಕ್ ಗಳನ್ನು ನಾನು ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ನಿಪಿ-3 ನೋಟಿಸ್‌ನಲ್ಲಿ ಬಾಕಿ ಮೊತ್ತ ರೂ. 42,05,000/- ಇದೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಹೀಗಿರುವಾಗ ನೋಟಿಸ್‌ನಲ್ಲಿ ನಮೂದು ಮಾಡಿರುವ ಮೊತ್ತ ಸರಿಯಾಗಿದೆಯೆ ? ಅಥವಾ ಚೆಕ್‌ನಲ್ಲಿ ನಮೂದು ಮಾಡಿದ ಮೊತ್ತ ಸರಿಯಾಗಿದೆಯೇ ? ಎಂದರೆ ಸಾಕ್ಷಿ ಬಾಕಿ ಮೊತ್ತ ರೂ.49,55,000/- ಇದೆ ಎಂದು ನುಡಿಯುತ್ತಾರೆ. ಬಾಕಿ ಮೊತ್ತ ರೂ. 49,55,000/- ಇದ್ದು ಆರೋಪಿ ನನಗೆ ರೂ.42,00,000/- ಕ್ಕೆ ನಿಪಿ 1 ಚೆಕ್‌ನ್ನು ನೀಡಿರುತ್ತಾರೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು, ಹೊಸಪೇಟೆ.